## ನಿಮ್ಮೊಡನೆ

# ಹಿರಿಯ ನಾಗರಿಕರಿಗೆ ನೆಮ್ಮದಿಯ ಬದುಕು ಕುಟುಂಬ ಹಾಗೂ ಸಮಾಜಕ್ಕೆ ಬದ್ಧತೆ ಬೇಕು

**ದುಡಿಮೆಯ ಹೆಚ್ಚಿನ ಶಕ್ತಿಯುಳ್ಳ ಯುವಶಕ್ತಿ ಎಲ್ಲರಿಗೂ ಆಕರ್ಷಕ. ದೇಶದ ಅಭಿವೃದ್ಧಿಯ ನಾಗಾಲೋಟಕ್ಕೆ ಹಿರಿಯ ನಾಗರಿಕರನ್ನು ಅಡ್ಡಿಯೆಂದು ಭಾವಿಸುವ ಮನಸ್ಥಿತಿಯೂ ಇದೆ. ಆದರೆ, ಹಿರಿಯರನ್ನು ನಿರ್ಲಕ್ಷಿಸುವ ಸಮಾಜ ಅಪೂರ್ಣ ಹಾಗೂ ಅಮಾನವೀಯ.**

ಇದು ‘ತಬರನ ಕತೆ 2023’. ಪೂರ್ಣಚಂದ್ರ ತೇಜಸ್ವಿಯವರ ‘ತಬರನ ಕತೆ’, ತನ್ನ ಹಕ್ಕಿನ ಪಿಂಚಣಿ ಹಣ ಪಡೆಯಲು ಕಚೇರಿಗೆ ಚಪ್ಪಲಿ ಸವೆಸುವ ನಿವೃತ್ತ ನೌಕರನೊಬ್ಬನಿಗೆ ಸಂಬಂಧಿಸಿದ್ದಾದರೆ, ಈಗಿನದು ತನ್ನ ತಂದೆಯ ಹಕ್ಕಿನ ಹಣ ಪಡೆಯಲು ಹೋರಾಡುತ್ತಿರುವ ಮಗನಿಗೆ ಸಂಬಂಧಿಸಿದ್ದು. ತಂದೆಯ ಬಾಕಿ ವೇತನ ಪಡೆಯಲು ದಶಕಗಳಿಂದ ಹೋರಾಡುತ್ತಿರುವ ಈ ಮಗನಿಗೀಗ 88 ವರ್ಷ! ತಂದೆಗೆ ದೊರೆಯಬೇಕಿದ್ದ ನ್ಯಾಯಕ್ಕಾಗಿ ವಯಸ್ಸಾದ ಮಗ ಅಲೆಯುವಂತಾಗಿರುವುದು ದುರದೃಷ್ಟಕರ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ; ಸರ್ಕಾರಿ ಅಧಿಕಾರಿಗಳು ಔಪಚಾರಿಕ ನಿಯಮಗಳಿಗೆ ಕಟ್ಟುಬಿದ್ದು ಸಂವೇದನಾಶೂನ್ಯರಾಗಿ ವರ್ತಿಸಬಾರದು ಎಂದು ಕಿವಿಮಾತನ್ನೂ ಹೇಳಿದೆ.

ಹೈಕೋರ್ಟ್ ಹೇಳಿರುವ ಸಂವೇದನೆಯ ಪಾಠ ಸರ್ಕಾರಿ ಅಧಿಕಾರಿಗಳಿಗೆ ಮಾತ್ರವಲ್ಲ, ಸಮಾಜಕ್ಕೂ ಅನ್ವಯಿಸುವಂತಹದ್ದು. ಪೋಷಕರನ್ನು ಮಕ್ಕಳು ನಿರ್ಲಕ್ಷಿಸಿದ್ದ ಇತ್ತೀಚಿನ ಪ್ರಕರಣವೊಂದರಲ್ಲಿ ಹೈಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯವೂ ಹಿರಿಯ ನಾಗರಿಕರ ವಿಷಯದಲ್ಲಿ ಸಮಾಜ ಅಸೂಕ್ಷ್ಮವಾಗಿ ವರ್ತಿಸುತ್ತಿರುವುದನ್ನು ಸೂಚಿಸುವಂತಿದೆ. ಸಂಧ್ಯಾಕಾಲದಲ್ಲಿರುವ ಅಮ್ಮ ಅಪ್ಪನನ್ನು ನೋಡಿಕೊಳ್ಳುವುದು ಮಕ್ಕಳ ಕಾನೂನು ಬಾಧ್ಯತೆ, ನೈತಿಕತೆ ಮತ್ತು ಕರ್ತವ್ಯ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಪೋಷಕರನ್ನು ನೋಡಿಕೊಳ್ಳುವುದು ಅವರಿಗೆ ಮಾಡುತ್ತಿರುವ ಸಹಾಯವೆಂದು ಭಾವಿಸಬಾರದೆಂದು ಸ್ಪಷ್ಟ ಮಾತುಗಳಲ್ಲಿ ಹೇಳಿದೆ.

ಹೆತ್ತವರನ್ನು ಹೇಗೆ ನೋಡಿಕೊಳ್ಳಬೇಕು ಎಂದು ನ್ಯಾಯಾಲಯದಿಂದ ಹೇಳಿಸಿಕೊಳ್ಳುವ ಸ್ಥಿತಿ ಇಂದಿನದು. ಹಿರಿಯ ನಾಗರಿಕರ ಬಗೆಗಿನ ನಿರ್ಲಕ್ಷ್ಯವನ್ನು ಕೌಟುಂಬಿಕ ಸಮಸ್ಯೆ ಎಂದು ಹೇಳಲಾಗದು. ಮನೆಗಳಲ್ಲಿ ಮಾತ್ರವಲ್ಲದೆ, ಸಾರ್ವಜನಿಕವಾಗಿಯೂ ಹಿರಿಯರನ್ನು ಗೌರವದಿಂದ ನಡೆಸಿಕೊಳ್ಳುವ ಮನೋಭಾವ ಕಡಿಮೆಯಾಗುತ್ತಿದೆ. ಅಂಚೆ ಕಚೇರಿಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ಪಿಂಚಣಿ ಅಥವಾ ವೃದ್ಧಾಪ್ಯ ವೇತನಕ್ಕಾಗಿ ಎಡತಾಕುವ ಹಿರಿಯ ನಾಗರಿಕರಿಗೆ ಮಾಹಿತಿ ನೀಡುವ ಸೌಜನ್ಯವೂ ಕೆಲವು ಅಧಿಕಾರಿಗಳಿಗಿರುವುದಿಲ್ಲ. ಬಸ್ಸುಗಳಲ್ಲಿ ಹಿರಿಯ ನಾಗರಿಕರು ನಿಂತಿದ್ದರೂ ಅವರಿಗೆ ಆಸನ ಬಿಟ್ಟುಕೊಡದೆ ಇರುವವರಿದ್ದಾರೆ. ವಾಹನಗಳ ಸಂದಣಿಯಲ್ಲಿ ಅಸಹಾಯಕರಾಗಿ ನಿಂತಿರುವ ಹಿರಿಯರು ನಮ್ಮ ವ್ಯವಸ್ಥೆಯ ಸಂವೇದನಾರಾಹಿತ್ಯದ ಉದಾಹರಣೆಗಳಂತೆ ಕಾಣಿಸುತ್ತಾರೆ.

ಹಿರಿಯ ನಾಗರಿಕರ ಹಿತಾಸಕ್ತಿ ರಕ್ಷಣೆಗಾಗಿ ‘ಪಾಲಕರ ಪೋಷಣೆ ಸಂರಕ್ಷಣೆ ಮತ್ತು ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ 2007’ ಜಾರಿಯಲ್ಲಿದೆ. ಆದರೆ, ಈ ಕಾಯ್ದೆಯ ಸಮರ್ಪಕ ಅನುಷ್ಠಾನ ಆಗಿರುವುದು ಕಡಿಮೆ. ಹಿರಿಯ ನಾಗರಿಕರ ನೆರವಿಗೆ ಕಾನೂನು ಪರಿಣಾಮಕಾರಿಯಾಗಿ ಒದಗಿಬರದಿರುವುದಕ್ಕೂ ವ್ಯವಸ್ಥೆಯ ಜಡತೆಯೇ ಕಾರಣವಾಗಿದೆ. ನೈತಿಕ ಬದ್ಧತೆಯಿಂದ ಆಗಬೇಕಾದ ಕರ್ತವ್ಯ ನಿರ್ವಹಣೆಗೆ ಕಾನೂನು ಅಗತ್ಯವೆನ್ನುವುದೇ ಮಾನವೀಯತೆಯನ್ನು ನೆಲೆಗಟ್ಟಾಗುಳ್ಳ ಸಮಾಜದಲ್ಲಿನ ಬಹುದೊಡ್ಡ ವ್ಯಂಗ್ಯವಾಗಿದೆ. ನೈತಿಕ ಬದ್ಧತೆಯ ಜೊತೆಗೆ ಕಾನೂನು ಕೂಡ ತೂಕಡಿಸುವಂತಹ ವ್ಯವಸ್ಥೆ ರೂಪುಗೊಳ್ಳುವಲ್ಲಿ ನಮ್ಮೆಲ್ಲರ ಪಾಲುದಾರಿಕೆಯಿದೆ ಎನ್ನುವುದು ದುರದೃಷ್ಟಕರ ಸಂಗತಿ.

ವೈದ್ಯಕೀಯ ಕ್ಷೇತ್ರದಲ್ಲಿನ ಆವಿಷ್ಕಾರಗಳಿಂದಾಗಿ ಜನರ ಜೀವಿತಾವಧಿ ಹೆಚ್ಚುತ್ತಿದ್ದು, ಹಿರಿಯ ನಾಗರಿಕರ ಸಂಖ್ಯೆ ವಿಶ್ವದಾದ್ಯಂತ ಏರುಮುಖದಲ್ಲಿದೆ. 2050ರ ವೇಳೆಗೆ ವಿಶ್ವದಲ್ಲಿ ಹಿರಿಯ ನಾಗರಿಕರ ಸಂಖ್ಯೆಯ 150 ಕೋಟಿ ಮುಟ್ಟುತ್ತದೆಂದು ವಿಶ್ವಸಂಸ್ಥೆ ಅಂದಾಜಿಸಿದೆ. 2022ರ ಜುಲೈನಲ್ಲಿ ಭಾರತದಲ್ಲಿದ್ದ ಹಿರಿಯ ನಾಗರಿಕರ ಸಂಖ್ಯೆ ಸುಮಾರು 15 ಕೋಟಿಯಷ್ಟಿತ್ತು. 2050ರ ವೇಳೆಗೆ ಈ ಪ್ರಮಾಣ ದುಪ್ಪಟ್ಟಾಗುವ ನಿರೀಕ್ಷೆಯಿದೆ. ಇಷ್ಟೊಂದು ದೊಡ್ಡ ಸಂಖ್ಯೆಯ ಹಿರಿಯರ ಯೋಗಕ್ಷೇಮ ನಿರ್ವಹಣೆಗೆ ಸೂಕ್ತ ಯೋಜನೆಗಳನ್ನು ರೂಪಿಸಿಕೊಳ್ಳಬೇಕಾದುದು ಸರ್ಕಾರಗಳ ಹೊಣೆಗಾರಿಕೆಯೂ ಹೌದು, ಕುಟುಂಬಗಳ ಬದ್ಧತೆಯೂ ಹೌದು.

ಹಿರಿಯ ನಾಗರಿಕರನ್ನು ಹೊರೆಯೆಂದು ಭಾವಿಸುವುದು ಯಾವುದೇ ಸಮಾಜಕ್ಕೆ ಶೋಭಿಸುವುದಿಲ್ಲ. ಹಿರಿಯರ ಅನುಭವ ಹಾಗೂ ಬೌದ್ಧಿಕ ಸಂಪತ್ತನ್ನು ಗುರ್ತಿಸಿ ಬಳಸಿಕೊಳ್ಳುವುದು ಆರೋಗ್ಯಕರ ಸಮಾಜದ ಲಕ್ಷಣ. ದೈಹಿಕ ಸಾಮರ್ಥ್ಯವಿರುವ ಹಿರಿಯರಿಗೆ ದುಡಿಯುವ ಗೌರವಯುತ ಅವಕಾಶಗಳನ್ನು ಕಲ್ಪಿಸಿಕೊಡುವುದರಿಂದ ಬಹಳಷ್ಟು ಸಮಸ್ಯೆಗಳು ಬಗೆಹರಿಯಲಿವೆ. ಸಿಂಗಪುರ, ಜಪಾನ್‌ನಂಥ ದೇಶಗಳಲ್ಲಿ ಹಿರಿಯ ನಾಗರಿಕರು ಘನತೆಯಿಂದ ಕಾರ್ಯ ನಿರ್ವಹಿಸುವ ಅವಕಾಶಗಳಿವೆ. ಅಂಥ ಅವಕಾಶಗಳು ನಮ್ಮಲ್ಲೂ ಸೃಷ್ಟಿಗೊಳ್ಳಬೇಕು. ಹಿರಿಯರ ಅನುಭವ ಯುವಜನಕ್ಕೆ ಪ್ರೇರಣೆಯಾಗಿ, ಬಂಡವಾಳವಾಗಿ ಒದಗಬೇಕು.

ದುಡಿಮೆಯ ಶಕ್ತಿಯುಳ್ಳ ಯುವಶಕ್ತಿ ಎಲ್ಲರಿಗೂ ಆಕರ್ಷಕ. ದೇಶದ ಅಭಿವೃದ್ಧಿಯ ನಾಗಾಲೋಟಕ್ಕೆ ಹಿರಿಯ ನಾಗರಿಕರನ್ನು ಅಡ್ಡಿಯೆಂದು ಭಾವಿಸುವ ಮನಸ್ಥಿತಿಯೂ ಇದೆ. ಆದರೆ, ಹಿರಿಯರನ್ನು ನಿರ್ಲಕ್ಷಿಸುವ ಸಮಾಜ ಅಪೂರ್ಣ ಹಾಗೂ ಅಮಾನವೀಯ. ಹಿರಿಯರ ಅನುಭವವನ್ನು ಸರಿಯಾಗಿ ಬಳಸಿಕೊಳ್ಳಲು ಆಗದೆ ಹೋದರೆ, ಅದು ವ್ಯವಸ್ಥೆಯ ಲೋಪ. ಸಮಾಜದ ನಿಜವಾದ ಚೆಲುವಿರುವುದೇ ಮಹಿಳೆ, ಮಕ್ಕಳು ಹಾಗೂ ಹಿರಿಯ ನಾಗರಿಕರ ಸಹಭಾಗಿತ್ವದಲ್ಲಿ.

■ **ರಘುನಾಥ ಚ.ಹ.**



ಈಶ್ವರ್